## ವಿಶ್ರಾಂತಿ ನಿಮಗಲ್ಲ



ತುಂಬ ದಿನಗಳಿಂದ ರಮೇಶ ಯಾಕೋ ಮಂಕಾಗಿದ್ದ. ಅವನ ಹೆಂಡತಿ ಪಮ್ಮಿ, ರಮೇಶನನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋದಳು. ತಪಾಸಣೆ ಮುಗಿಸಿದ ವೈದ್ಯರು, ಅವರಿಗೆ ವಿಶ್ರಾಂತಿಯ ಅಗತ್ಯವಿದೆ ಎಂದು ಹೇಳಿ ಅವಳಿಗೆ ನಾಲ್ಕು ನಿದ್ರೆ ಮಾತ್ರೆಗಳನ್ನು ನೀಡಿದರು. 'ಇವುಗಳನ್ನು ಅವರಿಗೆ ಯಾವಾಗ ಕೊಡಬೇಕು?' ಎಂದು ಕೇಳಿದಳು ಪಮ್ಮಿ. ವೈದ್ಯರು, 'ಈ ಮಾತ್ರೆಗಳು ಅವರಿಗಲ್ಲ, ನಿಮಗೆ. ಯಾಕಂದ್ರೆ ವಿಶ್ರಾಂತಿ ಬೇಕಿರುವುದು ನಿಮಗಲ್ಲ, ಅವರಿಗೆ' ಎಂದರು.

**ಪ. ರಾಮಕೃಷ್ಣ ಶಾಸ್ತ್ರಿ**

---

## ಗಮನ



ಪರಮೇಶಿ ಮಗನ ಶಾಲೆಯ ಪೋಷಕರ ಸಭೆಗೆ ಹೋಗಿದ್ದ. ಅಲ್ಲಿ ಪರಮೇಶಿ ಮಗ ನಾಗೇಶನ ಬಗ್ಗೆ ದೂರುಗಳ ಸುರಿಮಳೆಯೇ ಕೇಳಿ ಬಂತು. ಅದರ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳದ ಪರಮೇಶಿ ಶೀಲಾ ಮೇಡಂ ಅವರನ್ನೇ ತದೇಕ ಚಿತ್ತದಿಂದ ನೋಡುತ್ತಿದ್ದ. ಸಭೆ ಮುಗಿದ ಮೇಲೆ ಮುಖ್ಯ ಶಿಕ್ಷಕರು ಪರಮೇಶಿಯನ್ನು ತಮ್ಮ ಕೊಠಡಿಗೆ ಕರೆಸಿ ಹೇಳಿದರು, 'ನೋಡಿ ಪರಮೇಶಿ, ತಾವು ಶೀಲಾ ಮೇಡಂ ಕಡೆ ಗಮನ ಹರಿಸಿದಂತೆ, ತಮ್ಮ ಮಗನ ಕಡೆ ಗಮನ ಹರಿಸಿದ್ದರೆ ಆತ ಖಂಡಿತ ಫೇಲ್ ಆಗುತ್ತಿರಲಿಲ್ಲ' ಎಂದು. ತಾನು ನೋಡಿದ್ದು ಇವರಿಗೂ ಗೊತ್ತಾಗಿದೆ ಎಂದು ಅರಿತ ಪರಮೇಶಿ ಇಂಗು ತಿಂದ ಮಂಗನಂತಾದ!

**ಶಂಕರೇಗೌಡ ತುಂಬಕೆರೆ**

ಚಿತ್ರ: ಗಣೇಶ ಆಚಾರ್ಯ